International Journal of Kannada Research
www.kannadajournal.com

ISSN: 2454–5813
IJKR 2020; 6(1): 80-82
© 2020 IJKR
www.kannadajournal.com
Received: 07-11-2019
Accepted: 09-12-2019

**ಮಲ್ಲಪ್ಪ ಚೆನ್ನಭತ್ತಿ**
ಸಂಶೋಧನಾ ವಿದ್ಯಾರ್ಥಿ,
ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ, ಕರ್ನಾಟಕ
ವಿಶ್ವವಿದ್ಯಾಲಯ ಧಾರವಾಡ

**ಮಾರ್ಗದರ್ಶಕರು**
ಡಾ.ಕೃಷ್ಣ ನಾಯಕ, ಪ್ರಾಧ್ಯಾಪಕರು
ಡಾ. ಆರ್.ಸಿ. ಹಿರೇಮಠ ಕನ್ನಡ
ಅಧ್ಯಯನ ಪೀಠ, ಕರ್ನಾಟಕ
ವಿಶ್ವವಿದ್ಯಾಲಯ ಧಾರವಾಡ

**Corresponding Author:**
**ಮಲ್ಲಪ್ಪ ಚೆನ್ನಭತ್ತಿ**
ಸಂಶೋಧನಾ ವಿದ್ಯಾರ್ಥಿ,
ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ, ಕರ್ನಾಟಕ
ವಿಶ್ವವಿದ್ಯಾಲಯ ಧಾರವಾಡ

# ಡಾ. ಚಂದ್ರಶೇಖರ ಕಂಬಾರರ 'ನಾಯೀಕತೆ' ನಾಟಕದ ಶೋಷಿತ ವರ್ಗ

**ಮಲ್ಲಪ್ಪ ಚೆನ್ನಭತ್ತಿ, ಮಾರ್ಗದರ್ಶಕರು**

**ಪ್ರಸ್ತಾವನೆ:** ಸಾಮಾಜಿಕ ಸಮಸ್ಯೆಯನ್ನು ಕುರಿತು ರಚನೆಯಾಗಿರುವ ಈ ನಾಟಕ ಪ್ರೀತಿ ದೊಡ್ಡದೊ, ಹಣ ದೊಡ್ಡದೊ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಪ್ರಾರಂಭವಾಗುತ್ತದೆ. ಪ್ರೀತಿ, ಪ್ರೇಮ ಇವು ಕಾಸಿಗಿಂತಲೂ ದೊಡ್ಡದೆಂಬುದನ್ನು ತೋರಿಸಲು ಪ್ರಯತ್ನಿಸುವ ನಾಟಕ ಗಂಭೀರವಾದ ಸಮಸ್ಯೆಯ ಚಿತ್ರಣವನ್ನು ಮುಂದಿಡುತ್ತದೆ. ಮನುಷ್ಯತ್ವವನ್ನು ಮರೆತು ಮನುಷ್ಯನನ್ನು ಪ್ರಾಣಿಗಿಂತ ಕಡೆಯಾಗಿ ಕಾಣುವ ಸಿರಿವಂತ ವರ್ಗ ತಾನು ಮನುಷ್ಯನೆಂಬುದನ್ನೇ ಮರೆತು ಪ್ರಾಣಿಗಿಂತಲೂ ಕಡೆಯಾಗಿ ದಾಸ್ಯತ್ವವನ್ನು ಒಪ್ಪಿಕೊಳ್ಳುವ ಅಮಾಯಕರ ವರ್ಗ. ಈ ವರ್ಗ ತನ್ನ ದಾಸ್ಯತ್ವವನ್ನು ನಿರಾಕರಿಸಿದಾಗ ಉಂಟಾಗುವ ಬದಲಾವಣೆ, ತಲ್ಲಣಗಳನ್ನು ಇಲ್ಲಿ ಗುರುತಿಸಬಹುದು.

ಒಡೆಯ, ಆಳುಮಗ ಇವರ ಸಂಘರ್ಷದ ಬಗ್ಗೆ ಬರೆಯುವ ಕಂಬಾರರು ಮನುಷ್ಯನನ್ನು ಆಳುಮಗನನ್ನಾಗಿಸುವ ದಾಸ್ಯದ ಸ್ಥಿತಿಯ ಬಗ್ಗೆ ಮತ್ತೆ ಮತ್ತೆ ಮರಳುತ್ತಾರೆ. ದಾಸ್ಯವೆನ್ನುವುದು ಸಾಮಾಜಿಕ ಬದುಕಿನ ವಾಸ್ತವ ಸ್ಥಿತಿಯಾಗಿರುವ ಹಾಗೆ ಒಂದು ಮಾನಸಿಕ ಸ್ಥಿತಿ ಅಥವಾ ಮನುಷ್ಯನ ಆತ್ಮ ಒಂದು ಅವಸ್ಥೆಯೂ ಆಗಿ ಅವರಿಗೆ ಕಂಡಿದೆ. ದಾಸ್ಯವನ್ನು ಒಪ್ಪಿಕೊಂಡ ವರ್ಗ ಅಥವಾ ವ್ಯಕ್ತಿ ಅದನ್ನು ನಿರಾಕರಿಸಿಬಿಟ್ಟರೆ ಅಧಿಕಾರ ವ್ಯವಸ್ಥೆಯಲ್ಲಿ ಪಲ್ಲಟವಾಗಿಬಿಡುತ್ತದೆ. ಇಂಥ ಪಲ್ಲಟ ಮಾಡುವ ಸಾಮರ್ಥ್ಯವನ್ನು ಅಂಚಿನಲ್ಲಿರುವ ವ್ಯಕ್ತಿಗಳು ತಮ್ಮ ಒಡಲಾಳದಲ್ಲಿ ಇಟ್ಟುಕೊಂಡಿರುತ್ತಾರೆ. "ನಾಯೀಕತೆ" ನಾಟಕದಲ್ಲಿ ಈ ವಿಚಾರವೇ ಪ್ರಧಾನ ವಸ್ತುವಾಗಿದೆ. ನಾಯೀಮಗನೆಂದು ಕರೆಸಿಕೊಂಡು, ನಾಯಿಸ್ಥಿತಿಯನ್ನು ಒಪ್ಪಿಕೊಂಡವನು ಒಡೆಯನ ದೃಷ್ಟಿಗೆ ತಕ್ಕ ಹಾಗೆ ತನ್ನ ಆತ್ಮವನ್ನೇ ಕುಗ್ಗಿಸಿಕೊಂಡಿರುತ್ತಾನೆ. ಆದರೆ ತಾನು ಹಾಗಿರುವುದು ಅನಿವಾರ್ಯವಲ್ಲವೆಂದು ಅರಿತ ಕೂಡಲೇ ಅವನಿಗೆ ಬಿಡುಗಡೆ ಸಿಕ್ಕುತ್ತದೆ. ನಾಯೀಮಗನ ಆತ್ಮದಲ್ಲಿಯೇ ದಾಸ್ಯವೆನ್ನುವುದು ಹೊಕ್ಕಿಬಿಟ್ಟಿದೆ. ಆದ್ದರಿಂದ ಅವನಿಗೆ ಸ್ವಂತದ ಗುರುತು ಇಲ್ಲವೇ ಇಲ್ಲ. ಅಧುಕಾರದೆದುರಿಗೆ ಮನುಷ್ಯರು ತಮ್ಮ ಆತ್ಮವನ್ನೇ ಕುಗ್ಗಿಸಿಕೊಳ್ಳುತ್ತಾರೆನ್ನುವುದು ಕಂಬಾರರ ವಿಶೇಷ ಕುತೂಹಲಕ್ಕೆ ಕಾರಣವಾಗಿದೆ.

**ಕೀವರ್ಡ್ಸ್:** ಚಂದ್ರಶೇಖರ ಕಂಬಾರ, ನಾಯೀಕಥೆ, ಶೋಷಿತ ವರ್ಗ, ಉಳಿಗಮಾನ್ಯ ಪದ್ಧತಿ, ದಾಸ್ಯತ್ವ, ಪ್ರತಿಭಟನೆ, ಸ್ತ್ರೀ ಸಂವೇದನೆ, ಶ್ರೇಣಿಕೃತ ಸಮಾಜ, ಸಂಘರ್ಷ.

**ಸಾರಾಂಶ:**

"ಬೆನ್ನಾಗ ಬಲ ಇರಲಿಲ್ಲ. ಸೆಟದೇನೆಂದರ ಎದಿ ಇರಲಿಲ್ಲ ಯಾವತ್ತೂ ಬಗ್ಗಿಕೊಂಡು ಇರುತ್ತಿದ್ದ. ಹೀಗಾಗಿ ಸಾವ್ಕಾರ ಸೋಮಣ್ಣನ ಪಾದಾ ಕಂಡಿದ್ದ ಹೊರತು ಮೋತಿ ಕಂಡಿರಲಿಲ್ಲ. ಹಡದವರಿರಲಿಲ್ಲ, ಮನೀ ಇಲ್ಲಾ ಒಂದು ವಿಳಾಸ ಅಂತ ಇರಲಿಲ್ಲ, ಅಷ್ಟ ಅಲ್ಲಾ ಅವಗೊಂದ ಹೆಸರ ಇರಲಿಲ್ಲ". ಈ ವಿವರಗಳಲ್ಲೇ ನಾಯೀಮಗ ಕೇವಲ ಒಬ್ಬ ವ್ಯಕ್ತಿಯಾಗದೇ, ಅಸಮಾನತೆಯ ಕ್ರೂರ ಸಮಾಜದಲ್ಲಿ ನಿರಂತರವಾಗಿ ನಡೆದುಕೊಂಡು ಬಂದ ಪರಮ ವಿಧೇಯತಾ ಮೌಲ್ಯದ ಕಡುನಿಷ್ಠ ಪ್ರತಿನಿಧಿಯಾಗಿದ್ದಾನೆ. ಕೇವಲ ಆಜ್ಞಾಪಾಲಕನಾಗಿ ನಿಷ್ಠೆಗೆ ತನ್ನನ್ನು ತಾನು ಮಾರಿಕೊಂಡವ ಈತ. ಈ ಸ್ಥಿತಿಯನ್ನು ಶ್ರೀಮಂತ ವರ್ಗ ಹೇಗೆ ವೈಭವಿಸಿ ವಂಚಿಸುತ್ತದೆ ಎಂಬುದಕ್ಕೆ ಸೋಮಣ್ಣನ ಈ ಮಾತುಗಳು ಸಾಕ್ಷಿ. "ಇದು ನನ್ನ ನಾಯಿ, ಕಚ್ಚಂದರ ಕಚ್ಚತೈತಿ, ಬೊಗಳಂದರ ಬೊಗಳತೈತಿ. ಅಷ್ಟ ಅಲ್ಲ ಒಮ್ಮೊಮ್ಮೆ ಹಾಡತೈತಿ. ಎಂಥೆಂಥಾ ಬ್ಯಾಟೀನ ಹೆಂಗೆಂಗ ಹಾರಿ ಹಿಡಿದೈತಿ ಗೊತ್ತಾ? ಇಡೀ ತಗ್ಗಿನಾಗ ಇಂಥಾ ಜಾತಿವಂತ

ನಾಯಿ ಹುಡಿಕಿದರೂ ಸಿಕ್ಕೋದಿಲ್ಲ. ಇದು ಯಾವತ್ತೂ ಲೋಡ ಮಾಡಿದ ಬಂದೂಕನ್ಹಾಂಗ".

ನಾಯೀಮಗನ ಬಗೆಗಿನ ತಿರಸ್ಕಾರ ಮತ್ತು ನಿಷ್ಠೆಯ ವೈಭವೀಕರಣ, ಎರಡೂ ಸೇರಿರುವ ಈ ಮಾತುಗಳು ಊಳಿಗಮಾನ್ಯ ಪದ್ಧತಿಯ 'ಪ್ರಭು'ಗಳಿಗೆ ತೀರಾ ಸಹಜವೆಂಬುದನ್ನು ಇತಿಹಾಸವೇ ತೋರಿಸಿಕೊಟ್ಟಿದೆ. ಇವನದು ಇಂಥ ಖ್ಯಾತಿಯದರೆ ಸೊಮಣ್ಣನದು 'ನೀರಿನಾಗ ನೆರಳ ನೋಡಿ ಹಾರೋ ಹಕ್ಕಿ ಹೊಡದ – ಅಂಥ ಖ್ಯಾತಿ'. ಹೀಗೆ ಸೋಮಣ್ಣ ಮತ್ತು ನಾಯೀಮಗ ಈ ಶ್ರೇಣೀಕೃತ ಸಮಾಜದ ವಿರುದ್ಧ ನೆಲೆಗಳಲ್ಲಿ ನಿಂತಿದ್ದಾರೆ. ಒಬ್ಬ ಒಡೆಯ, ಇನ್ನೊಬ್ಬ ಆಳು, ಆಳಿನ ಸ್ಥಿತಿಗೆ ಸರಿಯಾದ ಕಾರಣ ಕೊಡುವವಳು ಸೋಮಣ್ಣನ ಬಲತ್ಕಾರಕ್ಕೊಳಗಾಗಲು ಪ್ರತಿಭಟಿಸುವ ಶಾರಿ, ಅವಳ ಪ್ರಕಾರ ನಾಯೀಮಗ 'ಹೊಟ್ಟೆ ಸಲುವಾಗಿ ನಾಯೀ ಆಗ್ಯಾನ'. ಆಕೆ ಸಾವಕಾರ ಸೋಮಣ್ಣನ ಮುಖಕ್ಕೆ ರಾಚಿದಂತೆ ಹೇಳುತ್ತಾಳೆ. "ನೀವೇನೊ ದೊಡ್ಡ ಶ್ರೀಮಂತರು. ಜಗತ್ತಿನಾಗ ಇದ್ದವರನ್ನೆಲ್ಲ ನಿಮ್ಮ ನೊಗಕ್ಕೆ ಹೊಡಬಲ್ಲಿರಿ. ಆದರ ನಾ ನಿಮ್ಮ ದನಾ ಆಗಾಕ ತಯಾರಿಲ್ಲ."

ಶೋಷಕ ಸಂಸ್ಕೃತಿಯ ಪ್ರಧಾನ ಲಕ್ಷಣವೆಂದರೆ ಕೆಲವರಿಗೆ ಪರಮ ಅಧಿಕಾರವನ್ನು ಕೊಟ್ಟರೆ ಅನೇಕರಿಗೆ ಪರಮ ವಿಧೇಯತೆಯನ್ನು ಉಪದೇಶಿಸುತ್ತದೆ. ಊಳಿಗಮಾನ್ಯ ಪದ್ಧತಿಯಲ್ಲಿ ಇದು ಮೌಲ್ಯ ವ್ಯವಸ್ಥೆಯಾಗಿ ರೂಪುಗೊಂಡಿದೆ. ಶೋಷಕ ಸಂಸ್ಕೃತಿಯಲ್ಲಿ ಶೂದ್ರರು ಮತ್ತು ಹೆಣ್ಣು ಸಮಾನರೆಂದು ಪರಿಗಣಿಸಲ್ಪಟ್ಟಿದ್ದಾರೆ.

ಈ ನಾಟಕದಲ್ಲಿ ದುಡಿಯುವ ಜನರ ಪ್ರತಿನಿಧಿಯಾಗುವ 'ನಾಯೀಮಗ' ಮತ್ತು ವಂಚನೆಯ ವೃತ್ತದಲ್ಲಿ ಸಿಕ್ಕಿ ಸಿಡಿಯುವ ಹೆಣ್ಣಾಗಿ 'ಶಾರಿ' ಬರುವುದರಿಂದ ನಾಟಕಕ್ಕೆ ಸಾಂಪ್ರದಾಯಿಕ ಸಂಸ್ಕೃತಿಯನ್ನು ಸೀಳಿ ಹೊರಡುವ ಶಕ್ತಿಗಳಾಗಿ ನಮಗೆ ಮುಖ್ಯರಾಗುತ್ತಾರೆ. ಈ ಮೂಲಕ ನಾಟಕವೂ ಮುಖ್ಯವಾಗುತ್ತದೆ. ಶಾರಿಯನ್ನು ಹರಾಜು ಹಾಕುವ 'ಮೇಳ'ದ ಮಾತುಗಳು ಹೀಗಿವೆ. 'ಬೇಕೆಂದರ ಕುಣೀತಾಳ, ಬ್ಯಾಡಂದರ ಹಾಸಿಗ್ಯಾಗತಾಳ ಸೋಳಾ ವರ್ಷ, ಬತ್ತೀಸ ಲಕ್ಷಣ, ಹತ್ತು ವರ್ಷ ಗ್ಯಾರಂಟಿ. ರಿಪೇರಿ ಚಾರ್ಜಿಲ್ಲ. ಬೇಡ್ರೆಪೋ ಬೇಡ್ರೀ... ಮೂಗಿಗೆ ಮುನ್ನೂರು, ಕಣ್ಣಿಗೆ ನಾನ್ನುರು, ಮೋತಿಗೆ ಹತ್ತಾರ ನುರು, ಎದಿಗಿ ಎಚಿಟ ನೂರು, ಸೊಂಟಕ ಸಾವಿರ... ಇದು ಅಮಾನವೀಯ ಪರಾಕಾಷ್ಠೆಯಾಗಿದೆ. ಹೀಗೆ ನಾಟಕ ಶೋಷಣೆಯ ಸುರುಳಿ ಬಿಚ್ಚುತ್ತ ಸಾಗಿ ನಾಯೀಮಗ ಮತ್ತು ಶಾರಿಯ ಸ್ಫೋಟದಲ್ಲಿ ಸಾರ್ಥಕತೆ ಪಡೆಯುತ್ತದೆ.

> 'ಸಾವ್ಕಾರ ಸೋಮಣ್ಣನವರು ಬಡವರ ಬೆಳಕಿನಾಗ ತಮ್ಮ ಅರಮನೀಗಿ ಹೋದರು'
> 'ಸಾವ್ಕಾರ್ರಿಗಿ ವಯಸ್ಸಾಗೋದಂದರೇನ್ರೀ.'
> 'ಏನ್ರೀ ಸಾವ್ಕಾರ ಹೀಗಂತೀರಿ? ಮನೀ ತುಂಬ ರೊಕ್ಕೇನು!
> ಊರ ತುಂಬ ಆಸ್ತಿಯೇನು!
> ಬೇಕಂದರ ಸರ್ಕಾರ ಕೊಳ್ಳತೀರಿ, ಮಾರತೀರಿ!'
> 'ಸೊಕ್ಕಿನಿಂದ ನಿಮ್ಮ ಕಣ್ಣು ನೆತ್ಯಾಗ ಹೋಗ್ಯಾವ ಸಾವ್ಕಾರರ ಅದಕ್ಕ ನಿಮಗ ಮನಿಶೇರೆಲ್ಲಾ ನಾಯಿಹಾಂಗ ಕಾಣತಾರ.'

ಈ ರೀತಿಯಾಗಿ 'ನಾಯೀಕತೆ' ನಾಟಕದಲ್ಲಿ ಪ್ರಮುಖವಾಗಿ ಶೋಷಿತರ ವರ್ಗವು ವಿಶೇಷವಾಗಿ ಕಂಡುಬರುತ್ತದೆ.

ನಾಯೀಕತೆ ಕಂಬಾರರ ಪ್ರಸಿದ್ಧ ನಾಟಕಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ವ್ಯವಸ್ಥೆಯ ಎರಡು ಅತೀರೇಕಗಳೆಂದರೆ ತುಂಬಾ ಎತ್ತರದಲ್ಲಿರುವ ಸಾವ್ಕಾರ ಸೋಮಣ್ಣ ನಾಯಕ. ಆದರೆ ಗುಲಾಮನಂತೆಯೇ ಬದುಕು ಕಳೆಯುತ್ತ ಕ್ರಮೇಣ ಸೋಮಣ್ಣನ ವಿರುದ್ಧ ಸಿಡಿದೇಳುವ ನಾಯೀಮಗ ಪಾತ್ರ ವಿಶಿಷ್ಟವಾದುದು.

ಸಾವ್ಕಾರ ಸೋಮಣ್ಣನ ಕಾಮದಾಟಕ್ಕೆ ಚೆಲುವಿ ಬಲಿಯಾಗಿ ಬಾವಿಗೆ ಬಿದ್ದು ಸಾಯುತ್ತಾಳೆ. ಸೋಮಣ್ಣ ತಾನು ಮದುವೆಯಾಗಿದ್ದರೂ ಬಯಲಾಟದ ಶಾರಿ, ಸಂಗೀತಳಿಗೆ ಮನಸೋತು ಆಕೆಯನ್ನು ಕರೆತಂದು ತೋಟದ ಮನೆಯಲ್ಲಿ ಇಟ್ಟಿರುತ್ತಾನೆ. ಶಾರಿಯ ತಂದೆ ತಾಯಿಯರು ಆಕೆಯನ್ನು ಸೋಮಣ್ಣನಿಗೆ ಅರ್ಪಿಸಲು ತುದಿಗಾಲಲ್ಲಿ ನಿಂತಿದ್ದಾರೆ. ಆದರೆ ಶಾರಿ ತಾನು ಇಲ್ಲಿಗೆ ಸೂಳಿತನ ಮಾಡಲು ಬಂದಿಲ್ಲ ಎಂದು ನಿರಾಕರಿಸುತ್ತಾಳೆ. ಸೋಮಣ್ಣ ಹೆಂಡತಿಯನ್ನು ತವರಿನಲ್ಲಿ ಬಿಟ್ಟು ಇಲ್ಲಿ ಶಾರಿಯೊಂದಿಗೆ ಚಕ್ಕಂದ ಆಡಲು ತಯಾರಾಗಿದ್ದಾನೆ. ತನ್ನನ್ನು ಬಂಧನದಲ್ಲಿಟ್ಟಿದ್ದನ್ನು ಶಾರಿ ಒಪ್ಪಿಕೊಳ್ಳುವುದಿಲ್ಲ. ಆದರೆ ಸೋಮಣ್ಣ ಆಕೆಯನ್ನು ಕಾಯಲು ನಾಯೀಮಗನನ್ನು ನೇಮಿಸಿದ್ದಾನೆ. ಶಾರಿಗೆ ನಾಯೀಮಗನಲ್ಲಿ ಮೊದಲು ಅನುಕಂಪ ಮೂಡಿ ಕ್ರಮೇಣ ಅದು ಪ್ರೇಮವಾಗಿ ಮಾರ್ಪಡುತ್ತದೆ. ಕ್ರಮೇಣ ನಾಯೀಮಗನ ಕೀಳರಿಮೆಯನ್ನು ಆಕೆ ಹೋಗಲಾಡಿಸುತ್ತಾಳೆ. ಸೋಮಣ್ಣ ಒತ್ತಾಯದಿಂದ ಶಾರಿಯನ್ನು ಮದುವೆಯಾಗಲು ಪ್ರಯತ್ನಿಸಿದಾಗ ನಾಯೀಮಗ ಅವನನ್ನು ಹೊಡೆಯುತ್ತಾನೆ. ಶಾರಿ ಸ್ವತಃ ನಾಯೀಮಗನೇ ತನ್ನ ಗಂಡ ಎಂದು ಘೋಷಿಸುತ್ತಾಳೆ. ಆ ಸಮಯದಲ್ಲಿ ಗಂಡ ಹಾಗೂ ದನ ಕಾಯುವ ಆಳಾಗಿದ್ದ ಮಾರುತಿ ಸೋಮಣ್ಣನ ಹೆಂಡತಿಯನ್ನು ಒಡಿಸಿಕೊಂಡು ಹೋದ ಸುದ್ದಿ ಬಂದು ಸಾವ್ಕಾರ ಸೋಮಣ್ಣ ಆಘಾತಕ್ಕೊಳಗಾಗುತ್ತಾನೆ. ಅವನ ಅಹಂಕಾರ ಭಗ್ನವಾಗುತ್ತದೆ.

ದುಡ್ಡಿನ ಮದದ ಸೋಮಣ್ಣ ಸುಮ್ಮನೇ ನಾಯೀಮಗನನ್ನು ಒದೆಯುತ್ತಿರುತ್ತಾನೆ. ಶಾರಿ ನಾಯೀಮಗನ ಹೃದಯವನ್ನು ಕೆದಕಿದಾಗ ಅವನಲ್ಲಿ ಸ್ವಾಭಿಮಾನದಿಂದ ಬದುಕುವ ಆಸೆ ಚಿಮ್ಮುತ್ತದೆ. ಅವನಿಗೆ ಶಾರಿ ಸಿದ್ಧರಾಮ ಎಂದು ಹೆಸರು ಕೊಡುತ್ತಾಳೆ. ಶಾರಿಯನ್ನು ಬಲಾತ್ಕಾರಿಸಲು ಮುಂದಾಗುವ ಸಾವ್ಕಾರನನ್ನು ನಾಯೀಮಗ ತಡೆದು ಹೊಡೆಯುತ್ತಾನೆ. ತನ್ಮೂಲಕ ಗುಲಾಮೀತನದಿಂದ ಮುಕ್ತಗೊಳ್ಳುತ್ತಾನೆ. ಚೆಲುವಿಯ ಗಂಡ ಮಾರುತಿಯನ್ನು ಸಾವ್ಕಾರ ದುರ್ಬಲ ಎಂದು ತಿಳಿದು ಅವನ ಹೆಂಡತಿಯನ್ನು ಕೆಡಿಸಿದ್ದ. ಅಂತಹ ಮಾರುತಿಯೇ ಸೋಮಣ್ಣನ ಹೆಂಡತಿಯನ್ನು ಕರೆದೊಯ್ದದ್ದು ಸಾಮಜಿಕ ನ್ಯಾಯಕ್ಕೆ ಸಂದ ಗೆಲುವು ಎಂಬುದನ್ನು ನಾಟಕ ಸಾಬೀತುಪಡಿಸುತ್ತದೆ.

ಮುಂದುವರೆದು ಸ್ತ್ರೀ ಶೋಷಣೆ ಕಾಣುವುದಾದರೆ ಇಲ್ಲಿ ಬರುವ ಶಾರಿಯು ಶೋಷಿತ ವರ್ಗದ ಪ್ರತಿನಿಧಿಯಾಗಿದ್ದಾಳೆ. ಗಂಡು ತನ್ನ ವೈಯಕ್ತಿಕ ಲಾಭಕ್ಕಾಗಿ, ಅನುಕೂಲಕ್ಕಾಗಿ ತಾನು ಮಾಡಿಕೊಂಡ ಹೆಣ್ಣನ್ನೇ ಬೇರೆಯವರ ಲೈಂಗಿಕ ಬಳಕೆಗೆ ಬಿಟ್ಟುಕೊಡುವುದನ್ನು 'ನಾಯೀಕತೆ' ನಾಟಕದಲ್ಲಿ ಚಿತ್ರಿಸಲಾಗಿದೆ. ದಾಸ ತನ್ನ ಆಟದಲ್ಲಿ ನಾಗನನ್ನು ಉಳಿಸಿಕೊಳ್ಳುವುದಕ್ಕಾಗಿ ತನ್ನ ಹೆಂಡತಿ ಸಾವಂತ್ರಿಯನ್ನೇ ನಾಗನ ಜೊತೆಯಾಗಿಸುತ್ತಾನೆ. ಇದೊಂದು ರೀತಿಯಾದರೆ ಹಣದ ಆಸೆಗಾಗಿ ಹೆತ್ತ ತಂದೆ ತಾಯಿಗಳೇ ತಮ್ಮ ಮಗಳನ್ನು ಭೋಗಕ್ಕಾಗಿ ಗಂಡಸಿಗೆ ಒಪ್ಪಿಸುವುದು ಇನ್ನೊಂದು ರೀತಿ. ದಾಸ ಸಾವಂತ್ರಿಯರು ಸ್ವಂತ ಇಚ್ಛೆಯಿಂದಲೇ ಶಾರಿಯನ್ನು ಸೋಮಣ್ಣನಿಗೆ ಒಪ್ಪಿಸುತ್ತಾರೆ. ಈ ದಳ್ಳಾಳಿತನ ಹೇಯ ಎಂಬ ಕಲ್ಪನೆಯೂ ಮೂಡದಂತೆ ಅವರು ಶೋಷಣೆಯ ಚಕ್ರದಲ್ಲಿ ಸೇರಿ ಹೋಗಿದ್ದಾರೆ. ಮಗಳನ್ನು ಬೆಳೆಸಲು, ಹಾಡು, ಕುಣಿತ ಕಲಿಸಲು ಮಾಡಿದ ಖರ್ಚನ್ನು ಭರಿಸಿಕೊಳ್ಳುವುದಷ್ಟೇ ಅವರಿಗೆ ಬೇಕಿದ್ದುದು. ಇಂಥ ಹಲವು ಹೀನ ಸಂಸ್ಕೃತಿ ಕಾಮದ ಎಡಬಲವೇ ಮೈಮುರಿದೇಳುತ್ತದೆ.

**ಸಮಾರೋಪ**

ಊಳಿಗಮಾನ್ಯ ವ್ಯವಸ್ಥೆಯಲ್ಲಿ ನಡೆಯುವ ಕ್ರೌರ್ಯ, ಶ್ರೇಣೀಕೃತ ಸಮಾಜದ ವಿರುದ್ಧ ನೆಲೆಗಳಲ್ಲಿ ಅತೀರೇಕಗಳನ್ನು ಬಿಚ್ಚಿಡುತ್ತ ಈ

ನಾಟಕ ಚಲಿಸುತ್ತದೆ. ಪ್ರೀತಿ, ಪ್ರೇಮ ದುಡ್ಡಿಗಿಂತ ದೊಡ್ಡದು, ಇಲ್ಲಿ ಶೋಷಣೆ ಸಲ್ಲ. ಎಂಬ ಭಾವನೆ ನಮ್ಮಲ್ಲಿ ಬರುವವರೆಗೂ ಇದೇ ರೀತಿಯಾದ ಶೋಷಣೆ ಮಾಡುವವರು ಇದ್ದೇ ಇರುತ್ತಾರೆ. ಎಂಬುದಾಗಿ ನಾವು ಮನಗಾಣಬಹುದಾಗಿದೆ.

ನಾಯೀಮಗ ಮತ್ತು ಶಾರಿ ಇಬ್ಬರೂ, ಪಾರಂಪರಿಕ ಸಾಂಪ್ರದಾಯಿಕ ವ್ಯವಸ್ಥೆಯನ್ನು ಮುರಿದು, ಶೋಷಕ ಸಂಸ್ಕೃತಿಯನ್ನು ಸೀಳುವ ಶಕ್ತಿಗಳಾಗುವ ಕಾರಣ ಈ ನಾಟಕ ಬಹುಮುಖ್ಯವೆನಿಸುತ್ತದೆ. ಆದುದರಿಂದ ಇಲ್ಲಿ ಬರುವ ಸಾವ್ಕಾರ ಸೋಮಣ್ಣ ಶೋಷಕನಾಗಿ ಮನುಷ್ಯನನ್ನು ನಾಯಿಯಂತೆ ಕಾಣುವ ಪ್ರಸಂಗವೂ ಅತೀರೇಕವಾಗಿ ಕಂಡುಬಂದಿದ್ದು ಇದರಲ್ಲಿ ಹಲವು ಪ್ರಸಂಗಗಳು ಬಹುಮುಖ್ಯವಾಗಿ ಗೋಚರಿಸುತ್ತವೆ. ತನ್ನ ಆಳುಗಳನ್ನೇ ಕೀಳಾಗಿ ಕಾಣುವ ಮನೋವೃತ್ತಿ ವಿಚಿತ್ರ ಎನಿಸಿದರೂ ಕಹಿ ಸತ್ಯವಾಗಿ ನಮ್ಮ ಕಣ್ಣ ಮುಂದೆ ಕಾಣುವ ಘಟನೆಗಳಾಗಿವೆ. ಮನುಷ್ಯನನ್ನು ಮನುಷ್ಯನನ್ನಾಗಿ ಇಲ್ಲಿ ಕಾಣುವುದಿಲ್ಲ. ಹಾಗೂ ಇಲ್ಲಿ ಹೆಣ್ಣೆಂದರೆ ಬರಿ ಭೋಗದ ವಸ್ತು ಎಂಬುದಾಗಿ ಭಾವಿಸಿದ್ದಾರೆ.

> ಹೆಣ್ಣೆಂದರ ಬರೀ ದೇಹ. 'ಎಷ್ಟು ತುಳಕ್ಯಾಡತಾಳೋ'
> ನೋಡಿದವರ ಬಾಯಾಗ ನೀರ ಬರೋ ಹಂಗ ಮಸ್ತ
> ತುಂಬಿಕೊಂಡಾಳ.

ಎನ್ನುವಂತ ಹಲವು ಕಾಮಪ್ರಚೋದಕ ಮಾತುಗಳು ಹೆಣ್ಣನ್ನು ನೋಡುವ ರೀತಿಯನ್ನು ಹಾಗೂ ಹೆಣ್ಣಿನ ಬಗೆಗೆ ಅವರಿಗಿರುವ ಮನೋವೃತ್ತಿಯನ್ನು ತಿಳಿಸುತ್ತವೆ.

ಒಟ್ಟಾರೆಯಾಗಿ ಶಾರಿಯ ಬಂಡು ಹಾಗೂ ನಾಯೀಮಗನ ಪುನರ್ಜನ್ಮಗಳಲ್ಲಿ ದಲಿತ ಜೀವನದ ಆಗುಹೋಗುಗಳ ಸಂದರ್ಭದಲ್ಲಿಯೂ ಸಾಂಕೇತಿಕತೆಯಿರುವುದರಿಂದ ಪ್ರೇಮದ ಕತೆ ದಲಿತ ಜಾಗೃತಿಯ ಕತೆಯೂ ಆಗುತ್ತದೆ.

**ಪರಾಮರ್ಶನ ಗ್ರಂಥಗಳು**


1. ಡಾ.ಚಂದ್ರಶೇಖರ ಕಂಬಾರ–ನಾಯೀಕತೆ,ಅಂಕಿತ ಪುಸ್ತಕ, ಬೆಂಗಳೂರು–2011
2. ಜಿ.ಎಂ.ಕೃಷ್ಣಮೂರ್ತಿ–ಜನಪದ ಸಂಸ್ಕೃತಿಯ ಮಹಾ ಸಾಹಿತಿ ಚಂದ್ರಶೇಖರ ಕಂಬಾರ,
3. ವಸಂತ ಪ್ರಕಾಶನ, ಬೆಂಗಳೂರು–2018
4. ಜಿ.ಎಸ್.ಭಟ್ಟ(ಸಂ)–ಕಂಬಾರ ಸಾಹಿತ್ಯ ಬಿಂಬ, ತನುಮನ ಪ್ರಕಾಶನ, ಮೈಸೂರು–2018
5. ಡಾ.ಎಚ್.ನಾಗವೇಣಿ–ರಂಗಸಂಪನ್ನರು, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು–2004